ಅಧ್ಯಕ್ಷರು: ಅಲ್ಲಿ ಗನ್ ಲೈಸೆನ್ಸ್ ತೆಗೆದುಕೊಳ್ಳಬಾರದು ಎಂದೇನೂ ಇಲ್ಲ, ಅದನ್ನು ಉಪಧ್ಯಾಯರು ಇಟ್ಟುಕೊಳ್ಳಬಾರದು ಎಂದೇನೂ ಇಲ್ಲ, ಆದರೆ ಅದನ್ನು ತೆಗೆದುಕೊಂಡು ಶಾಲೆಗೆ ಹೋಗಬಾರದು. ಶಾಲೆಗೆ ಗನ್‌ನ್ನು ತೆಗೆದುಕೊಂಡು ಆ ಉಪಾಧ್ಯಾಯ ಹೋಗುತ್ತಿರುವುದರಿಂದ ಅದನ್ನು ದುರುಪಯೋಗ ಮಾಡಿಕೊಳ್ಳುವ ಸಾಧ್ಯತೆ ಇದೆ ಎಂದು ತಾವು ಅಧಿಕಾರಿಗಳಿಗೆ ಹೇಳಿ ಆ ಗನ್ ಲೈಸನ್ಸ್ ಕ್ಯಾನ್ಸೆಲ್ ಮಾಡಿಸಿ.

(ಈ) ದಕ್ಷಿಣ ಕನ್ನಡ ಜಿಲ್ಲೆಯನ್ನು ತುಳು ಜಿಲ್ಲೆಯನ್ನಾಗಿ ನಾಮಕರಣ.

ಶ್ರೀ ಕೆ.ಜಯರಾಮಶೆಟ್ಟಿ (ಉಳ್ಳಾಲ್): ಅಧ್ಯಕ್ಷರೆ, ದಕ್ಷಿಣ ಕನ್ನಡ ಜಿಲ್ಲೆ, ತುಳು ಭಾಷೆ, ಸಾಹಿತ್ಯ, ಸಂಸ್ಕೃತಿ, ಜಾನಪದ, ಯಕ್ಷಗಾನ, ಭೂತಾರಾಧನೆ, ಮುಂತಾದವುಗಳಿಗೆ ಹೆಸರಾದ ಜಿಲ್ಲೆ. ದಕ್ಷಿಣ ಕನ್ನಡ ಜಿಲ್ಲೆಯನ್ನು ಇತ್ತೀಚಿಗೆ ವಿಭಜನೆ ಮಾಡಿ ಉಡುಪಿ ಜಿಲ್ಲೆಯನ್ನು ಪ್ರತ್ಯೇಕ ಮಾಡಿದ್ದಾರೆ. ಆ ಭಾಗದ 15 ಜನ ಶಾಸಕರಿದ್ದರೂ ಅವರ ಹತ್ತಿರ ಸಮಾಲೋಚನೆ ಮಾಡದೆ ಈ ಕಾರ್ಯವನ್ನು ಮಾಡಿದ್ದಾರೆ. ನಾನು ಆ ಬಗ್ಗೆ ವಿಚಾರ ಮಾಡಲಿಕ್ಕೆ ಈಗ ಹೋಗುವುದಿಲ್ಲ. ಏಕೆಂದರೆ ಇದು ಮುಗಿಯದ ವಿಚಾರವಾಗಿದೆ. ದೇಶದಲ್ಲಿ ಸುಮಾರು 50 ಲಕ್ಷ ಜನ ತುಳು ಮಾತನಾಡುವ ಮಾತೃಭಾಷೆಯ ಜನರಿದ್ದಾರೆ. ಈಗ ವಿಭಜನೆಯ ನಂತರ ಉತ್ತರ ಕನ್ನಡ, ದಕ್ಷಿಣ ಕನ್ನಡ ಮಧ್ಯದಲ್ಲಿ ಉಡುಪಿ ಜಿಲ್ಲೆಎಂದು ಮಾಡಿಕೊಂಡಿದ್ದಾರೆ. ತುಳುನಾಡಿನ ಇತಿಹಾಸದಂತೆ ಇಲ್ಲಿನ ಜನರು ಪರಶುರಾಮ ಸೃಷ್ಟಿಯ ಇತಿಹಾಸದಲ್ಲಿ ಬೆಳೆದವರು. ವೀರರಾದ ಕೋಟಿ ಚೆನ್ನಯ್ಯ, ಕಾಂತಾತಾರ್, ಬೂದಬಾರ್, ಆಗೋಳ್ ಮಂಜಣ್ಣ, ದೇವ ಪುಂಜ, ದೇಶದ ಪ್ರಪ್ರಥಮ ಸ್ವಾತಂತ್ರ್ಯ ಹೋರಾಟಗಾರ ಮಹಿಳೆ ಚೌಟರಾಣಿ, ಉಳ್ಳಾಲದ ಅಬ್ಬಕ್ಕದೇವಿ, ಈ ತುಳುನಾಡಿಗೆ ಹೆಸರನ್ನು ತಂದವರು. ಪಂಚ ದ್ರಾವಿಡ ಭಾಷೆಗಳಲ್ಲಿ ಒಂದಾದ ಈ ತುಳು ಭಾಷೆ ಅಭಿವೃದ್ಧಿ ಪಡಿಸುವ ದೃಷ್ಟಿಯಿಂದ ರಾಜ್ಯ ಸರ್ಕಾರ ಈ ಭಾಷೆಗೆ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ತುಳು ಸಾಹಿತ್ಯ ಅಕಾಡೆಮಿಯನ್ನು ಕೂಡ ರಚಿಸಿ, ಪ್ರೋತ್ಸಾಹ ನೀಡಿದೆ. ತುಳುವರೇ ಅಧಿಕವಾಗಿರುವ ಜನ, ತುಳು ಭಾಷೆಯನ್ನೇ ಹೆಚ್ಚಾಗಿ ಮಾತನಾಡುವ ಜನ, ಅನ್ಯ ಮತದವರೂ ಕೂಡ ತುಳು ಭಾಷೆಯನ್ನು ಬಲ್ಲವರಾಗಿರುವುದರಿಂದ ಮಂಗಳೂರು ಕೇಂದ್ರವಾಗಿರುವ ಈ ಜಿಲ್ಲೆಯಲ್ಲಿ ಈಗ ಮೂರು ಜನ ಸಂಸತ್ ಸದಸ್ಯರಲ್ಲಿ ಇಬ್ಬರು ಸಂಸತ್ ಸದಸ್ಯರು...ವಿಷಯ ಏನೆಂದರೆ 9ಜನರಲ್ಲಿ 8 ಜನ ಎಲ್ಲಾ ತುಳು ಭಾಷೆಯನ್ನು ಮಾತನಾಡುವವರು ಇರುವುದರಿಂದ ಈಗ ಉಳಿದಿರುವುದಕ್ಕೆ ತುಳು ಜಿಲ್ಲೆ ಎಂದು ನಾಮಕರಣ ಮಾಡಬೇಕೆಂದು ನಾನು ರಾಜ್ಯ ಸರ್ಕಾರವನ್ನು ಒತ್ತಾಯ ಮಾಡುತ್ತೇನೆ. ನಾನು ತುಳು ಜಿಲ್ಲೆಯನ್ನು ಕೇಳುತ್ತಿಲ್ಲ, ನಾನು ಇಲ್ಲಿ ಸ್ಪಷ್ಟ ಪಡಿಸುವುದೇನೆಂದರೆ, ಈ ದೇಶದ ಸುಮಾರು 50 ಲಕ್ಷ ತುಳು ಭಾಷೆ ಮಾತನಾಡುವ ಜನರ ಭಾಷಾಭಿವೃದ್ಧಿಯ ದೃಷ್ಟಿಯಿಂದ ಈ ಜಿಲ್ಲೆಗೆ ತುಳು ಜಿಲ್ಲೆ ಎಂದು ನಾಮಕರಣ ಮಾಡಬೇಕು; ಕರ್ನಾಟಕಕ್ಕೆ ಮುಂಚೆ ಮೈಸೂರು ಎಂದು ಹೆಸರಿತ್ತು. ಕನ್ನಡ ಮಾತನಾಡುವವರು ಇದ್ದಾರೆಂದು ಇದಕ್ಕೆ ಕರ್ನಾಟಕ ಎಂದು ನಾಮಕರಣ ಮಾಡಿದೆ.

ಕೊಡುಗು ಭಾಷೆ ಮಾತನಾಡುವವರು ಇರುವುದರಿಂದ ಅದನ್ನು ಕೊಡಗು ಜಿಲ್ಲೆ ಎಂದು ನಾಮಕರಣ ಮಾಡಿದ್ದಾರೆ. ಆದ್ದರಿಂದ ಭಾಷೆಯ ವಿಚಾರವಾಗಿರುವುದರಿಂದ, ಈ ತುಳು ಭಾಷೆಗೆ ಹೆಚ್ಚು ಪ್ರೋತ್ಸಾಹ ಕೊಡುವ ದೃಷ್ಟಿಯಿಂದ ಉಳಿದ ಭಾಗವಾದ ಮಂಗಳೂರು ಕೇಂದ್ರವಾಗಿರುವ ಈ ಭಾಗವನ್ನು ತಾವು ತುಳು ಜಿಲ್ಲೆ ಎಂದು ನಾಮಕರಣ ಮಾಡಬೇಕು ಎಂದು ನಾನು ರಾಜ್ಯ ಸರ್ಕಾರವನ್ನು ತಮ್ಮ ಮೂಲಕ ಒತ್ತಾಯಿಸುತ್ತಿದ್ದೇನೆ.

ಅಧ್ಯಕ್ಷರು: ಇಲ್ಲ ಸಮಗ್ರ ಕರ್ನಾಟಕದ ಹಿತದೃಷ್ಟಿಯಿಂದ ಇಂತಹ ಬೇಡಿಕೆಗಳಿಗೆ ನಾವು ಅವಕಾಶ ಕೊಡಬಾರದು, ರಾಜ್ಯಕ್ಕೆ ಒಳ್ಳೆಯದಾಗುವುದಿಲ್ಲ, ಕರ್ನಾಟಕ ಏಕೀಕರಣಕ್ಕೆ ಬಹಳ ಜನ ತಮ್ಮ ಪ್ರಾಣವನ್ನು ತ್ಯಾಗ ಮಾಡಿ ಈ ಕರ್ನಾಟಕವನ್ನು ಸೃಷ್ಟಿ ಮಾಡಿದ್ದಾರೆ, ಇದರ ವಿಚಾರವಾಗಿ ತಾವು ಆನಂತರ ಬನ್ನಿ ಬೇಕಾದರೆ ನಾನು ನಿಮ್ಮ ಹತ್ತಿರ ಚರ್ಚೆ ಮಾಡುತ್ತೇನೆ.

ಶ್ರೀ ಕೆ.ಜಯರಾಮಶೆಟ್ಟಿ: ಜನರ ಭಾವನೆಯನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈ ದೇಶದಲ್ಲಿ 50 ಲಕ್ಷ ಜನ ತುಳು ಭಾಷೆ ಮಾತನಾಡುವ ಜನರಿದ್ದಾರೆ,

ಅಧ್ಯಕ್ಷರು: ಆಯಿತು, ಈಗ ಅದರ ಮೇಲೆ ಚರ್ಚೆ ಬೇಡ, ತಾವು ದಯಮಾಡಿ ನನ್ನ ಕಛೇರಿಗೆ ಬನ್ನಿ ನಾವು ನೀವು ಮಾತನಾಡೋಣ. There is no need for the Government to answer. ಆಯಿತು ತಮಗೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಪ್ರಕಾಶ್ ಬಿ.ಹುಕ್ಕೇರಿ: ಮಾನ್ಯ ಅಧ್ಯಕ್ಷರೇ, ನಾನು ಪ್ರಸ್ತಾಪ ಮಾಡುವ ವಿಷಯ....

ಅಧ್ಯಕ್ಷರು: ದಯವಿಟ್ಟು ನೀವೂ ನನ್ನ ಕಚೇರಿಗೆ ಬರಬೇಕು. ನಿನ್ನೆ ಮುಖ್ಯಮಂತ್ರಿಗಳು ಆ ವಿಚಾರದಲ್ಲಿ ಫೈನಲ್ ಸ್ಟೇಟ್‌ಮೆಂಟ್ ಮಾಡಿದ್ದಾರೆ. ತಾವು ಮತ್ತೆ ರೀ ಓಪನ್ ಮಾಡಬೇಕಾದರೆ, ದಯಮಾಡಿ ತಾವು ನನ್ನ ಆಫೀಸಿಗೆ ಬನ್ನಿ.

ಶ್ರೀಮತಿ ಪ್ರಮೀಳಾ ನೇಸರ್ಗಿ: ಸನ್ಮಾನ್ಯ ಅಧ್ಯಕ್ಷರೇ, ಇವತ್ತು ತಾವೆಲ್ಲಾ ಕೂಡ ಪತ್ರಿಕೆಯಲ್ಲಿ ಓದಿದ್ದೀರಿ. ಹೈಕೋರ್ಟ್ ಜೋನಲ್ ರೆಗ್ಯುಲೇಷನ್ ಅಮೆಂಡ್‌ಮೆಂಟ್ ಆಕ್ಟನ್ನು ವಾಯ್ಡ್ ಎಂದು ಈಗಾಗಲೇ ತೀರ್ಮಾನ ಮಾಡಿದ್ದಾರೆ. ಸುಪ್ರೀಂ ಕೋರ್ಟಿನಲ್ಲಿ ಆರ್ಡರ್ ಆಗಿತ್ತು.

ಅಧ್ಯಕ್ಷರು: ಈಗ ಕಾನೂನು ಸಚಿವರು ಇಲ್ಲ. ಇದನ್ನು ನಾಳೆ ತೆಗೆದುಕೊಳ್ಳೋಣ. ತಮ್ಮ ನೋಟೀಸ್ ತಡವಾಗಿ ನನಗೆ ತಲುಪಿತು. I will ask him to be present here tomorrow.